ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಹತ್ತು ಎಕರೆಗೆ ಒಳಪಟ್ಟು ಅಚ್ಚುಕಟ್ಟು ಇರತಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡಿನವರಿಗೇ ವಹಿಸಿಕೊಡಲಾಗಿದೆ. ಅಂತಹ 16,000ಕೆರೆಗಳು ಇವೆ. ಬಾಕಿ ಉಳಿಕೆಯಾಗಿರತಕ್ಕ 22,000 ಕೆರೆಗಳ ಬಗ್ಗೆ ಸರ್ಕಾರದವರು ತೀವ್ರ ಪರಿಶೀಲನೆ ಮಾಡುತ್ತಾ ಇದ್ದಾರೆ. ಕೋಟ್ಯಾಂತರ ರೂಪಾಯಿ ಹಣ ಸಹ ಬೇಕಾಗಿದೆ. ಪಿ. ಡಬ್ಲ್ಯು. ಡಿ. ಅವರ ವಶಕ್ಕೆ ಎಷ್ಟು ಕೆರೆಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ತೀವ್ರ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರಲಾಗುತ್ತದೆ ಎಂದು ಹೇಳಿದೆ.

Sri H. R. KESHAVAMURTHY.—What are the departments that are responsible for the maintenance of the tanks ?

ಶ್ರೀ ಆಲೂರು ಹನುಮಂತಪ್ಪ.—ಪಿ. ಡಬ್ಲ್ಯು. ಡಿ. ಅವರ ಕಂಟ್ರೋಲಿಗೆ ಬಂದಿರತಕ್ಕ ಕೆರೆಗಳನ್ನು ಅವರು ಮೇನ್‌ಟೇನ್ ಮಾಡುತ್ತಾರೆ. ಬಾಕೀದನ್ನು ರೈತರೇ ಮೇನ್‌ಟೇನ್ ಮಾಡಿಕೊಳ್ಳಬೇಕಾಗುತ್ತದೆ, ರಿಪೇರಿ ಕೆಲಸ ಪಿ. ಡಬ್ಲ್ಯು. ಡಿ. ಅವರು ಮಾಡುತ್ತಾ ಇದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಕೆರೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಪ್ರಯತ್ನ ಮಾಡುತ್ತೇವೆ.

Posting of Doctor to the Government Hospital at Gurmitkal.

*Q.—1036. Sri VIDYADHAR GURUJI SAYANNA (Gurmitkal).—

Will the Government be pleased to state:—

(*a*) since how long the post of doctor at the Government Hospital, Gurmitkal is vacant ;

(*b*) the reasons for the delay in posting the doctor to the said hospital so far ;

(*c*) whether they are aware that the stock of medicines in the above hospital has been sealed up ?

A.—Sri K. NAGAPPA ALVA (Minister for Health).—

(*a*) From 7-5-1963.

(*b*) Paucity of doctors.

(*c*) No.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಗುರುಮಿಟ್‌ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 5 ತಿಂಗಳಿನಿಂದ ಡಾಕ್ಟರು ಇಲ್ಲ ಎಂದು ಹೇಳಿದ್ದೀರಿ; ಇದಕ್ಕೆ ಕಾರಣ ಏನೆಂದರೆ ಮೈದ್ಯರ ಕೊರತೆ ಎಂದು ಹೇಳಿದ್ದೀರಿ; ಹಾಗಿದ್ದ ಮೇಲೆ ಮೊದಲು ಅಲ್ಲಿದ್ದ ಡಾಕ್ಟರನ್ನು ಅಲ್ಲಿಂದ ಬೇರೆ ಕಡೆಗೆ ಕಳುಹಿಸಲಿಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಡಾಕ್ಟರು ಅಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಇದ್ದರು ಅಲ್ಲದೇ ಟ್ರಾನ್ಸ್‌ಫರ್‌ಬೇಕೆಂದು ಕೇಳಿಕೊಂಡಿದ್ದರು; ಆದ್ದರಿಂದ ಟ್ರಾನ್ಸ್‌ಫರ್ ಮಾಡಿದೆ. ಡಿಫೆನ್ಸ್ ಸರ್ವೀಸಿಗೂ ಕೂಡ ಅವರು ಸೇರಿದ್ದಾರೆ.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಅಲ್ಲಿ ಸರಿಯಾದ ವ್ಯವಸ್ಥೆ ಮಾಡಲಾರದೇ ಎಂದರೆ ಬೇರೆ ಡಾಕ್ಟರ ವ್ಯವಸ್ಥೆ ಮಾಡದೇ ಇದ್ದ ಡಾಕ್ಟರನ್ನು ಅಲ್ಲಿಂದ ಕಳುಹಿಸುವುದು ಸರ್ಕಾರದ ಅಯೋಗ್ಯತನ ತೋರಿಸುವುದಿಲ್ಲವೇ ?

Mr. SPEAKER.—I know that the hon. member did not mean anything. If he wants let him put a question in Hindi.

ಶ್ರೀ ಕೆ. ನಾಗಪ್ಪ ಆಳ್ವ.—ಅಯೋಗ್ಯತನ ಎಂಬ ಶಬ್ದಕ್ಕೆ ಉತ್ತರ ಕೊಡಬೇಕೇ, ಸ್ವಾಮಿ ? (ಸಭೆಯಲ್ಲಿ ನಗು).

Mr. SPEAKER.—He did not mean anything at all. I can see from that.

ಶ್ರೀ ಕೆ. ನಾಗಪ್ಪ ಆಳ್ವ.—ಆ ರೀತಿ ಏನೂ ಇಲ್ಲ, ಅದಕ್ಕೆ ಬೇಕಾದ ಏರ್ಪಾಡುಗಳನ್ನೂ ಕೂಡ ಮಾಡಿದ್ದೇವೆ.

Sri J. P. SARWESH.—What is the daily average number of patients who are treated in this hospital ?

Sri K. NAGAPPA ALVA.—That information is not here.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇಂಥಾ ಪ್ರಶ್ನೆಗೆ ಯಾವಾಗಲೂ ಈ ಸಭೆಯಲ್ಲಿ ವೈದ್ಯರ ಕೊರತೆ ಇದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಈ ಭಾವವನ್ನು ನೀಗಿಸುವುದಕ್ಕೆ ಬೇರೆ ರಾಜ್ಯದಿಂದ ಏನಾದರೂ ಡಾಕ್ಟರುಗಳನ್ನು ಕರೆಸತಕ್ಕ ವ್ಯವಸ್ಥೆ ಮಾಡಿದ್ದೀರಾ ಸ್ವಾಮಿ ?

Mr. SPEAKER —Does the member propose to import doctors from outside the State to make up the shortage ? That is the question.

ಶ್ರೀ ಕೆ. ನಾಗಪ್ಪ ಆಳ್ವ.—ಪಬ್ಲಿಕ್ ಸರ್ವೀಸ್ ಕಮಿಷನ್ ಮುಖಾಂತರ ರೆಕ್ರೂಟ್‌ಮೆಂಟ್ ಮಾಡಿಕೊಳ್ಳತಕ್ಕ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ.—ಗುರುಮಿಟ್‌ಕಲ್ 12-13 ಸಾವಿರ ಜನಸಂಖ್ಯೆ ಇರತಕ್ಕ ಟೌನು ಎರಡು ತಿಂಗಳ ಹಿಂದೆ ಅಲ್ಲಿ ಕಾಲರಾ ಸೋಂಕು ತಗಲಿ ಇನ್ಯಾಕ್ಯುಲೇಷನ್ ಮೂಡಲು ಡಾಕ್ಟರು ಇಲ್ಲದೇ ತೊಂದರೆಯಾದುದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿ ತಕ್ಕ ಕಾರ್ಯ ಕ್ರಮ ತೆಗೆದುಕೊಂಡಿದ್ದೆವು ?

Sri J. P. SARWESH.—Is not the paucity of Doctors due to the low scale of pay we give as compared with other States ?

Sri K. NAGAPPA ALVA.—It is not exactly so, Sir.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಇದನ್ನು ಆಂಧ್ರ ಪ್ರದೇಶದ ಒಂದು ಭಾಗವೆಂದು ಪರಿಗಣಿಸಿ ಇದರ ಅಭಿವೃದ್ಧಿಯನ್ನು ತಾತ್ಸಾರ ಮಾಡುತ್ತಿರುವುದು ಮೈಸೂರು ರಾಜ್ಯಸರ್ಕಾರದ ಹಾಲಿಸಿಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹೊಸ ಮೈಸೂರು ರಾಜ್ಯದ ಎಲ್ಲ ಭಾಗಗಳನ್ನೂ ಅಭಿವೃದ್ಧಿ ಮಾಡಲಾಗುತ್ತಿದೆ.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಹಾಗಾದರೆ ಈಗ ಸರ್ಕಾರ ಆ ಭಾಗವನ್ನು ನೆಗ್ಲೆಕ್ಟ್ ಮಾಡಿಲ್ಲವೆ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಂದು ಸ್ಥಳದಿಂದ ಒಬ್ಬ ಡಾಕ್ಟರನ್ನು ವರ್ಗ ಮಾಡ ಬೇಕಾಗಿದ್ದರೆ ಆತನ ಮೇಲೆ ಯಾವ ದೂರುಗಳೂ ಇಲ್ಲದಿದ್ದ ಭಾಗದಲ್ಲಿ ಅಂಥ ಡಾಕ್ಟರನ್ನು ಎಷ್ಟು ಕಾಲವಾಗಲಿ ಅದೇ ಸ್ಥಳದಲ್ಲಿಡಲು ತೊಂದರೆಯೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಕಾಲದ ಪರಿಸ್ಥಿತಿ ನೋಡಿಕೊಂಡು ಇದನ್ನು ಮಾಡುತ್ತೇವೆ.

Sri B. P. KADAM.—Who is in charge of this hospital, Sir ?

Sri K. NAGAPPA ALVA.—The Medical Officer of Yadgir is in charge of this hospital.

ಶ್ರೀ ಎಸ್. ಗೋಪಾಲ ಸಾರೆನ್ನ.—ಮೆಡಿಕಲ್ ಕಾಲೇಜಿನಿಂದ ಡಿಗ್ರಿಪಡೆದು ಹೊರಗೆ ಬರತಕ್ಕ ಡಾಕ್ಟರುಗಳೆಲ್ಲ ಕೇವಲ ಬೆಂಗಳೂರು ಮತ್ತು ಮಂಗಳೂರು ಇಂಥ ದೊಡ್ಡ ದೊಡ್ಡ ನಗರಗಳಲ್ಲೇ ನಿಲ್ಲುತ್ತಿರುವುದರಿಂದ ಅಂಥವರನ್ನು ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸಲು ಸರ್ಕಾರದವರು ಏಕೆ ಒಂದು ಕಾನೂನನ್ನು ಮಾಡಬಾರದು ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೇ ಈಗ ಮಾಡುತ್ತಿದ್ದೇವೆ.